


# ಅಯ್ಯಯ್ಯೋ ವಿಷ ಉದ್ಯಾನ!



ಉದ್ಯಾನ ಎಂದಾಕ್ಷಣ ನಮಗೆ ಮನಸ್ಸಿನಲ್ಲಿ ಮೂಡುವುದು ಆಹ್ಲಾದವೆನಿಸುವ ಹಸಿರು ಹುಲ್ಲುಹಾಸು, ಬಣ್ಣ ಬಣ್ಣದ ಪುಷ್ಪಗಳಿಂದ ತುಂಬಿರುವ ಗಿಡಮರಗಳು, ಹೂಗಳ ಸುತ್ತಲೂ ಹಾರಾಡುತ್ತಿರುವ ದುಂಬಿಗಳು, ಗಾಳಿ ಬೀಸಿದಾಗ ಮೂಗಿಗೆ ಬಡಿಯುವ ಸುವಾಸಿತ ಹೂಗಳ ಮಧುರವಾದ ಪರಿಮಳ ಅಲ್ಲವೇ? ಆದರೆ ಇಂಗ್ಲೆಂಡ್‌ನಲ್ಲಿ ಒಂದು ವಿಚಿತ್ರವೆನಿಸುವ ವಿಷ ಉದ್ಯಾನವಿದೆ. ಇದರ ಗೇಟ್‌ನಲ್ಲಿ ತಲೆಬುರುಡೆಯ ಚಿಹ್ನೆಯೊಂದಿಗೆ ಇಲ್ಲಿರುವ ಗಿಡಗಳು ಮಾರಣಾಂತಿಕ ಎಂಬ ಎಚ್ಚರಿಕೆಯ ಬರಹವಿದೆ!

ನಾರ್ತಂಬರ್‌ಲ್ಯಾಂಡಿನಲ್ಲಿ ಗ್ರೇಟ್ ಬ್ರಿಟನ್‌ನ ಎರಡನೇ ದೊಡ್ಡ ಕೋಟೆ ಎಂದು ಹೆಸರಾಗಿರುವ ಅಲ್ನ್ವಿಕ್ ಕ್ಯಾಸಲ್‌ಗೆ ಹೊಂದಿಕೊಂಡಂತೆ ಅನೇಕ ಸಾರ್ವಜನಿಕ ಉದ್ಯಾನಗಳಿವೆ. ಇದರಲ್ಲಿ ಅಲ್ನ್ವಿಕ್ ವಿಷ ಉದ್ಯಾನವೂ ಒಂದು. ಈ ಉದ್ಯಾನವು ವಿಶ್ವದ ಅನೇಕ ಅಪಾಯಕಾರಿ ಸಸ್ಯಗಳನ್ನು ಹೊಂದಿರುವುದರಿಂದ ಇದಕ್ಕೆ 'ಪಾಯ್ಸನ್ ಗಾರ್ಡನ್' ಹೆಸರು ಬಂದಿದೆ.

ಮಾದಕ ದ್ರವ್ಯ ಸೇವನೆಯನ್ನು ತಡೆಗಟ್ಟುವ ಪರಿಕಲ್ಪನೆಯಲ್ಲಿ ರೂಪುಗೊಂಡಿರುವ ಈ ಉದ್ಯಾನದಲ್ಲಿರುವ ಯಾವುದೇ ಸಸ್ಯವನ್ನು ಮುಟ್ಟುವಂತಿಲ್ಲ, ಮೂಸುವಂತಿಲ್ಲ ಹಾಗೂ ಕತ್ತರಿಸುವಂತಿಲ್ಲ. ಇಲ್ಲಿಗೆ ಭೇಟಿ ನೀಡುವವರಿಗೆ ಸಸ್ಯಗಳ ಬಗ್ಗೆ ಮಾಹಿತಿ ಮತ್ತು ಮಾದಕ ವಸ್ತುಗಳ ಸೇವನೆ ತಡೆಗಟ್ಟುವ ಬಗ್ಗೆ ಮಾರ್ಗದರ್ಶಕರು ಪಾಠ ಹೇಳಿ ಕೊಡುತ್ತಾರೆ. ಸಾರ್ವಜನಿಕ ಸುರಕ್ಷತೆಗಾಗಿ ಮತ್ತು ಕಳ್ಳರನ್ನು ತಡೆಯುವುದಕ್ಕಾಗಿ ವಿಶೇಷ ಕ್ಯಾಮೆರಾದ ಕಣ್ಗಾವಲಿದೆ.

**ವಿದ್ಯಾ ವಿ. ಹಾಲಭಾವಿ**